**<u>ದಿನಾಂಕಃ 13.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು 5 ಮತ್ತು 6ನೇ ಪ್ರತಿವಾದಿ ಪರ ಶ್ರೀ. ಹೆಚ್ ಎಸ್ ಹೆಚ್ ವಕೀಲರಿಂದಃ-</u>**

1. ತಮ್ಮ ತಂದೆ ಪ್ರಸ್ತುತ ದಾವೆಯನ್ನು ಪ್ರತಿವಾದಿಯರ ವಿರುದ್ದ ಹೂಡಿದ್ದು ಸದರಿ ದಾವೆ ಹೂಡಿದ ಬಗ್ಗೆ ತಮಗೆ ಯಾವಾಗ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿ ನನ್ನ ತಂದೆ ತೀರಿಕೊಂಡ ನಂತರ ಗೊತ್ತಾಗಿರುತ್ತದೆ ಎನ್ನುತ್ತಾರೆ. ನನ್ನ ತಂದೆ ತೀರಿಕೊಂಡಾಗ ಈ ದಾವೆಯ ವಿಚಾರವಾಗಿ ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಇತ್ತು ಎಂದರೆ ಸರಿ. ದಾವಾ ಸ್ವತ್ತಿನ ಕ್ರಯದ ವಿಚಾರ ಬಗ್ಗೆ ತಾವು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನನ್ನ ತಂದೆ ತಿಳಿದುಕೊಂಡಿದ್ದರು ನಾನು ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಿದ್ದೆ ಎನ್ನುತ್ತಾರೆ. 2010ನೇ ಇಸವಿಯಿಂದ ದಾವಾ ಸ್ವತ್ತಿನಲ್ಲಿ ನಾನು ಮತ್ತು ನನ್ನ ಕುಟುಂಬಸ್ಥರು ವ್ಯವಸಾಯ ಮಾಡುತ್ತಿದ್ದೇವೆ. ದಾವಾ ಆಸ್ತಿಯನ್ನು ತಮ್ಮ ತಂದೆ ಕ್ರಯಕ್ಕೆ ಪಡೆದಿರುತ್ತಾರೆ ಎಂದು ದಾವೆ ಹೂಡಿದ್ದು ದಾವಾ ಆಸ್ತಿಯನ್ನು ತಮ್ಮ ತಂದೆಗೆ ಯಾರು ಯಾರು ಸೇರಿ ಮಾರಾಟ ಮಾಡಿರುತ್ತಾರೆ ಎಂದು ತಮಗೆ ಗೊತ್ತಾ ಎಂದರೆ ಸಾಕ್ಷಿ ಲಕ್ಕೇಗೌಡ ಅವರ ಮಗ ಲಕ್ಕರಾಜು, ಇನ್ನಿತರರು ಸೇರಿ ಮಾರಾಟ ಮಾಡಿದ್ದಾರೆ ಎನ್ನುತ್ತಾರೆ.

2. ಲಕ್ಕೇಗೌಡರಿಗೆ ಲಕ್ಕರಾಜು ರವರನ್ನು ಒಳಗೊಂಡಂತೆ 1ನೇ ಪ್ರತಿವಾದಿ ರಮೇಶ, 5 ಮತ್ತು 6ನೇ ಪ್ರತಿವಾದಿಗಳು ಲಕ್ಕೇಗೌಡರ ಮಕ್ಕಳು ಎಂದರೆ ಸಾಕ್ಷಿ ಸದರಿ ಲಕ್ಕೇಗೌಡರು ಕ್ರಯ ಪತ್ರ ಮಾಡಿಸಿಕೊಳ್ಳುವ ಸಮಯಕ್ಕೆ ಅವರ ಕುಟುಂಬ ಸದಸ್ಯರ ಬಗ್ಗೆ ಸರಿಯಾದ ಮಾಹಿತಿ ಕೊಟ್ಟಿರಲಿಲ್ಲ ಎನ್ನುತ್ತಾರೆ. 2004ನೇ ಇಸವಿಗೆ ನನ್ನ ವಯಸ್ಸು 21-22 ವಯಸ್ಸು ಇತ್ತು ಎಂದರೆ ಸರಿ. ನಮ್ಮ ಕುಟುಂಬದಲ್ಲಿ ನಾನೊಬ್ಬನೇ ಪದವೀಧರ ಎಂದರೆ ಸರಿ. ದಾವಾ ಪೂರ್ವ ಕಾಲಕ್ಕೆ ತಮ್ಮ ತಂದೆ ತಮ್ಮನೇನಾದರೂ ವಕೀಲರ ಕಛೇರಿಗೆ ಕರೆದುಕೊಂಡು ಹೋಗಿ ಮಾಹಿತಿ ನೀಡಿದ್ದರಾ ಎಂದರೆ ಸಾಕ್ಷಿ ಮಾಹಿತಿ ಇಲ್ಲ ಎನ್ನುತ್ತಾರೆ.

ತಮ್ಮ ತಂದೆ ಬದುಕಿದ್ದ ಅವಧಿಯಲ್ಲಿ ಈ ದಾವೆಯ ಬಗ್ಗೆ ತಮಗೆ ಮಾಹಿತಿ ಇತ್ತಾ ಎಂದರೆ ಸಾಕ್ಷಿ ನಮ್ಮ ತಂದೆ ಎಲ್ಲಾ ನೋಡಿಕೊಳ್ಳುತ್ತಿದ್ದರು ನನಗೆ ಅಷ್ಟು ಮಾಹಿತಿ ಇಲ್ಲ ಎನ್ನುತ್ತಾರೆ. ದಿ 11.08.2004ರ ಅವಧಿಗೆ 1ನೇ ಪ್ರತಿವಾದಿಯ ವಯಸ್ಸು 26 ವರ್ಷ ಹಾಗೆಯೇ 5ನೇ ಪ್ರತಿವಾದಿಯ ವಯಸ್ಸು 28 ವರ್ಷ ಇತ್ತು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿದು, ವಿಷಯ ಮರೆಮಾಚಿ ಕ್ರಯಪತ್ರ ಮಾಡಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

3. 1ನೇ ಪ್ರತಿವಾದಿ 2003ನೇ ಇಸವಿಯಿಂದ ಮೈಸೂರು ಟೌನ್‌ನಲ್ಲಿ ವಾಸ ಇದ್ದರು ಎಂದರೆ ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿಯು ಕ್ರಯಪತ್ರದಲ್ಲಿ ಹೆಬ್ಬೆಟ್ಟಿನ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಪಿ-11ರಲ್ಲಿ 2ನೇ ಪ್ರತಿವಾದಿಯ ಸಹಿಯನ್ನು ಅಕ್ಷರದಲ್ಲಿ ಬರೆದಿದೆ ಎಂದು ನೋಡಿ ಒಪ್ಪಿ ಈ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕ್ರಯಪತ್ರದಲ್ಲಿ ಲಕ್ಕೇಗೌಡರ ಸಹಿ ಇದೆ ಎಂದರೆ ಸರಿ. ನಿಪಿ-10ರಲ್ಲಿ ಲಕ್ಕೇಗೌಡರ ಹೆಬ್ಬೆಟ್ಟಿನ ಸಹಿ ಇದೆ ಎಂದರೆ ಸಾಕ್ಷಿ ಅವರನ್ನೇ ಕೇಳಬೇಕು ಎನ್ನುತ್ತಾರೆ. ಅಸಲು ದಾವಾ ಸಂಖ್ಯೆ 137/2004 ರ ಆದೇಶದ ಮೇಲೆ ತಾವು ಅಪೀಲೆನಾದರೂ ಮಾಡಿದ್ದೀರಾ ಎಂದರೆ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ. ತಮ್ಮ ತಂದೆ ದಾವಾ ಆಸ್ತಿಯನ್ನು ಖರೀದಿ ಮಾಡುವ ಕಾಲಕ್ಕೆ ಪ್ರತಿವಾದಿ ತಂದೆ ಕಡೆಯಿಂದ ವಂಶವೃಕ್ಷವನ್ನು ಪಡೆದು ಪರಿಶೀಲಿಸಿರುತ್ತಾರಾ ಎಂದರೆ ಸಾಕ್ಷಿ ಈ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಲಕ್ಕೇಗೌಡರಿಗೆ ಪ್ರತಿವಾದಿ 1, ಪ್ರತಿವಾದಿ 5, 6 ಮಕ್ಕಳು ಇದ್ದರು ಅವರನ್ನು ಮರೆಮಾಚಿ ನನ್ನ ತಂದೆ ಮತ್ತು ಸದರಿ ಪ್ರತಿವಾದಿಯರ ತಂದೆ ಪ್ರಸ್ತುತ ದಾವೆಯ ಕ್ರಯ ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

4. ಅಸಲು ದಾವಾ 137/2004ರ ದಾವೆಯ ತೀರ್ಪಿನನ್ವಯ ಎಫ್ ಡಿ ಪಿ ಅರ್ಜಿ ದಾಖಲಾಗಿ ಲಕ್ಕೇಗೌಡರಿಗೆ ಸೇರಿದ ಆಸ್ತಿಗಳು ವಿಭಾಗದಂತೆ ಹಂಚಿಕೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಲಕ್ಕೇಗೌಡರಿಗೆ ಸೇರಿದ ಆಸ್ತಿಗಳು ವಿಭಾಗ ಆದ ನಂತರ ನನ್ನ ತಂದೆ

ಪ್ರತಿವಾದಿಯರ ವಿರುದ್ದ ಈ ಸುಳ್ಳು ದಾವೆ ತಂದ್ದಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆ ಲಕ್ಕೇಗೌಡರ ಜೊತೆ ಮಾತನಾಡಿ ಪ್ರತಿವಾದಿ 1, 5, 6 ಭಾಗಕ್ಕೆ ಬರಬೇಕಾದ ಆಸ್ತಿಯ ಪರವಾಗಿ ಹಣವನ್ನು ಕೊಡುತ್ತೇನೆ ಎಂದು ಮಾತುಕತೆ ಮಾಡಿದ್ದರು ಈ ವಿಷಯ ಗೊತ್ತಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪ್ರತಿವಾದಿ 1, 5, 6 ಭಾಗಾಂಶದ ಹಕ್ಕು ಹೊಂದಿದ್ದಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 1ನೇ ಪ್ರತಿವಾದಿ ಪರ ಶ್ರೀ. ಎಂ ಟಿ ಎಸ್ ವಕೀಲರಿಂದಃ-**

1. ದಾವಾ ಆಸ್ತಿಯು ಲಕ್ಕೇಗೌಡ ಮತ್ತು ಅವರ ಕುಟುಂಬಕ್ಕೆ ಸೇರಿದ ಆಸ್ತಿ ಪಿತ್ರಾರ್ಜಿತ ಆಸ್ತಿ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯು ಪ್ರತಿವಾದಿಯರಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿ ಇದ್ದು, ಅದರಲ್ಲಿ ಪ್ರತಿವಾದಿಯರಿಗೂ ಸಹ ಹಕ್ಕು ಇದೆ ಎಂದರೆ ಸರಿಯಲ್ಲ.

**1ನೇ ಪ್ರತಿವಾದಿಪರ ವಕೀಲರು 5 ಮತ್ತು 6ನೇ ಪ್ರತಿವಾದಿಗಳ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು ಅದರಂತೆ ಪ್ರತಿವಾದಿ 5 ಮತ್ತು 6ನೇ ಪ್ರತಿವಾದಿಗಳ ಪರ ಮಾಡಿದ ಪಾಟೀ ಸವಾಲನ್ನೇ 1ನೇ ಪ್ರತಿವಾದಿ ಪರ ಪಾಟೀ ಸವಾಲು ಎಂದು ಅಳವಡಿಸಿಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ